ಪ್ರತಿಭಾವಂತ ಪ.ಜಾತಿ ಮತ್ತು ಪ.ವರ್ಗದ ವಿದ್ಯಾರ್ಥಿಗಳಿಗೆ ಒಂದು ಮತ್ತು ಎರಡನೇ ದರ್ಜೆಗಳಿಗೆ ನೇರ ನೇಮಕಾತಿ

197- ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ (ಬೇಲೂರು): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಪ್ರತಿಭಾವಂತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಒಂದು ಮತ್ತು ಎರಡನೇ ದರ್ಜೆಗೆ ನೇರ ನೇಮಕಾತಿ 1982 - 1983 ನೇ ಸಾಲಿನಲ್ಲಿ ಮಾಡಿ ನಂತರದ ವರ್ಷಗಳಲ್ಲಿ ನೇರ ನೇಮಕಾತಿ ಮಾಡದಿರುವುದು ನಿಜವೇ?*

ಆ) *1983 - 84ನೇ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ 40 ಜನ ಅಭ್ಯರ್ಥಿಗಳಿಗೆ ಒಂದು ಮತ್ತು ಎರಡನೇ ದರ್ಜೆ ನೌಕರರಿಗೆ ಸಂದರ್ಶನ ನಡೆಸಿದ ನಂತರ ಫಲಿತಾಂಶ ಪ್ರಕಟವಾಗುವ ಮುನ್ನ ಸಾರ್ವಜನಿಕ ಸೇವಾ ಆಯೋಗಕ್ಕೆ ವಹಿಸಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಪ್ರತಿಭಾವಂತ ಅಭ್ಯರ್ಥಿಗಳಿಗೆ ಅನ್ಯಾಯ ಮಾಡಿದಂತಾಗಲಿಲ್ಲವೇ?*

ಇ) *ಸರ್ಕಾರ ನೀತಿಗನುಗುಣವಾಗಿ ಮೇಲ್ಕಂಡ ಜನಾಂಗದ ಪ್ರತಿಭಾವಂತರಿಗೆ 1983-1984ನೇ ವರ್ಷದಿಂದ ಈ ವರ್ಷದವರೆಗೆ ಒಂದು ಮತ್ತು ಎರಡನೇ ದರ್ಜೆ ನೌಕರಿ ಕೊಡಲು ಸರ್ಕಾರದ ನಿಲುವೇನು?*

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):

ಅ) ಇಲ್ಲ.

ಆ) 1983-84ನೇ ಸಾಲಿನ ಆಯ್ಕೆ ಮಾಡಲಾಗಿದೆ. ಆ ನಂತರದ ವರ್ಷಗಳ ನೇಮಕಾತಿಗಾಗಿ ರಿಕ್ತಸ್ಥಾನಗಳ ಬಗ್ಗೆ ಮಾಹಿತಿ ಕೋರಿ ಎಲ್ಲಾ ಇಲಾಖೆಗಳಿಗೂ ಪತ್ರ ಬರೆದಿದೆ.

ಇ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ವಿಶೇಷ ನೇಮಕಾತಿ ಕರ್ನಾಟಕ ಲೋಕ ಸೇವಾ ಆಯೋಗದ ಪರಿಮಿತಿಯಲ್ಲಿ ಬರುವುದಿಲ್ಲ ಹಾಗೂ 1983-84 ನೇ ಸಾಲಿನ ಆಯ್ಕೆಯು ತಿದ್ದುಪಡಿ ನಿಯಮಗಳನ್ವಯ ಮೌಖಿಕ ಪರೀಕ್ಷೆ ಇಲ್ಲದೆ ಅಭ್ಯರ್ಥಿಗಳನ್ನು ಅವರ ಅರ್ಹತೆ ಆಧಾರದ ಮೇಲೆ ಸರ್ಕಾರದ ವತಿಯಿಂದ ನೇಮಕಾತಿ ಮಾಡಲಾಗಿದೆ.

ಈ) 1983-84ನೇ ಸಾಲಿನ ಆಯ್ಕೆ ಮಾಡಿದೆ. 1984-85ರಿಂದೀಚಿನ ಆಯ್ಕೆ ವಿಷಯ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಬೇಲೂರು ಮತ್ತು ಹಳೇಬೀಡುಗಳಿಗೆ ಪೊಲೀಸ್ ಠಾಣೆ

200 - ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೇಲೂರು ಮತ್ತು ಹಳೇಬೀಡುಗಳಿಗೆ ಪ್ರವಾಸಿಗಳ ಒತ್ತಡ ಹೆಚ್ಚಾಗಿರುವುದರಿಂದ ಹಳೇಬೀಡು ಮಾದಿಪಳ್ಳಿ ಹೋಬಳಿಗಳನ್ನು ಸೇರಿಸಿ ಹಳೇಬೀಡಿಗೆ ಸಬ್‌ಇನ್ಸ್‌ಪೆಕ್ಟರ್ ಹೊಂದಿರುವ ಪೊಲೀಸ್ ಠಾಣೆ ಕೊಡುವುದಾಗಿ ಎರಡು ವರ್ಷಗಳ ಹಿಂದೆ ಆಗಿನ ಗೃಹ ಸಚಿವರು ಈ ಸಭೆಯ ಆಯವ್ಯಯ ಅಂದಾಜು ಚರ್ಚೆ ವೇಳೆಯಲ್ಲಿ ಆಶ್ವಾಸನೆ ಕೊಟ್ಟಿದ್ದು ಈವರೆಗೆ ಆಗದಿರಲು ಕಾರಣವೇನು?*

ಆ) *ಆಶ್ವಾಸನೆ ಈಡೇರುವುದು ಯಾವಾಗ?*

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು) :

ಅ) ಆಯವ್ಯಯ ಚರ್ಚೆ ವೇಳೆಯಲ್ಲಿ ನೀಡಿದ್ದ ಆಶ್ವಾಸನೆ ಇಲಾಖೆಯ ಗಮನಕ್ಕೆ ಬಂದಿಲ್ಲ, ಹಾಗೂ ಪ್ರಸ್ತಾವನೆ ಸರ್ಕಾರದಲ್ಲಿ ಬಾಕಿಯಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಭೂಸೇನೆ ನಿಗಮದ ಕಟ್ಟಡಗಳ ಕಳಪೆ ನಿರ್ಮಾಣ

199 - ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಭೂ ಸೇನೆಗೆ ಸರ್ಕಾರ ವಹಿಸಿರುವ ಕಟ್ಟಡಗಳ ಗುಣಮಟ್ಟ ತೀರಾ ಕಳಪೆಯಾಗಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ?

ಆ) ಭೂ ಸೇನೆಯು ವಹಿಸಿಕೊಂಡಿರುವ ಕಟ್ಟಡಗಳ ಅಂದಾಜು ವೆಚ್ಚ ಲೋಕೋಪಯೋಗಿ ಇಲಾಖಾ ಕಟ್ಟಡಗಳ ಅಂದಾಜಿಗಿಂತ ಹೆಚ್ಚಾಗಿಲ್ಲವೆ?

ಇ) ಕರ್ನಾಟಕ ಭೂ ಸೇನೆಯು ತನ್ನ ಇಲಾಖೆ ಮತಿಯಿಂದ ಕಟ್ಟಡ ನಿರ್ಮಾಣ ಕೆಲಸ ಕೈಗೊಳ್ಳುತ್ತಿದೆಯೇ ಅಥವಾ ಸಬ್ ಕಂಟ್ರಾಕ್ಟ್ ಕೊಟ್ಟು ಕೆಲಸ ಮಾಡಿಸುತ್ತಿದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):

ಅ) ಇಲ್ಲ.

ಆ) ಹೌದು. ಕಾರಣ, ಭೂ ಸೇನಾ ನಿಗಮದ ಅಂದಾಜು ಪಟ್ಟಿಯಲ್ಲಿ ನಿರ್ವಹಣಾ ವೆಚ್ಚವು ಸೇರಿರುವುದರಿಂದ.

ಇ) ಭೂ ಸೇನಾ ನಿಗಮವು ಇಲಾಖಾ ಮತಿಯಿಂದ ಮಾತ್ರ ಕಾಮಗಾರಿಗಳನ್ನು ನಿರ್ವಹಿಸುತ್ತಿವೆ.

ಸರ್ಕಾರಿ ಸ್ವಾಮ್ಯದ ಕಾರ್ಖಾನೆಗಳನ್ನು ಖಾಸಗಿಯವರಿಗೆ ವಹಿಸುವುದರ ಬಗ್ಗೆ

198 - ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಸರ್ಕಾರ ತನ್ನ ಒಡೆತನದ ಯಾವ ಯಾವ ಕಾರ್ಖಾನೆಗಳನ್ನು ಖಾಸಗಿಯವರಿಗೆ ಮಾರಾಟ ಮಾಡಲು ಯೋಜಿಸಿದೆ.

ಆ) ನಷ್ಟದಲ್ಲಿ ನಡೆಯುತ್ತಿರುವ ಕಾರ್ಖಾನೆಗಳೆಷ್ಟು ಮತ್ತು ಪ್ರತಿ ಕಾರ್ಖಾನೆಯ ನಷ್ಟದ ಮೊಬಲಗೆಷ್ಟು?

ಇ) ಸರ್ಕಾರಿ ಒಡೆತನದ ಕಾರ್ಖಾನೆಗಳು ಅನೇಕ ವರ್ಷಗಳಿಂದ ನಷ್ಟ ಅನುಭವಿಸುತ್ತಿರುವುದಕ್ಕೆ ಕಾರಣಗಳನ್ನು ಕಂಡುಹಿಡಿಯಲಾಗಿದೆಯೇ ಹಾಗೂ ಅವುಗಳ ಪುನಶ್ಚೇತನ ಸಾಧ್ಯವಿಲ್ಲವೇ?

ಶ್ರೀ ರಾಮಲಿಂಗಾರೆಡ್ಡಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ರಾಜ್ಯ ಸಚಿವರು):

ಅ) ರಾಜ್ಯದ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಣಗೊಳಿಸಬೇಕೇ ಅಥವಾ ಬೇಡವೇ ಎಂಬ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) 17

ಅನುಬಂಧದಲ್ಲಿ ನೀಡಲಾಗಿದೆ.

[illegible]